ಎಂ.ಆರ್.ಪಿ.ಎಲ್.ನವರೊಂದಿಗೆ ಯಾವುದೇ ಅಧಿಕಾರಿ ಶಾಮೀಲಾಗಿದ್ದರೆ ಅಂಥವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತು ಕೈಗಾರಿಕೆಯವರೊಡನೆ ಮಾತನಾಡಿ ಅದೆಷ್ಟೇ ಎಕರೆ ಬೆಳೆ ನಾಶವಾಗಿದ್ದರೂ ಅಷ್ಟು ಪರಿಹಾರವನ್ನು ಕೊಡಿಸತಕ್ಕ ಕೆಲಸ ಮಾಡುತ್ತೇವೆ. ಮತ್ತು ಈಗಾಗಲೇ ತ್ಯಾಜ್ಯವಸ್ತುಗಳು ಹೋಗುವ ನೀರನ್ನು ನಿಲ್ಲಿಸುವ ಬಗ್ಗೆ ಪ್ರಾಪಿಬಿಟರಿ ಅರ್ಡರನ್ನು ಸರ್ಕಾರ ಹೊರಡಿಸಿದೆಯೆಂದು ಹೇಳಿದ್ದಾರೆ. ಬಹಳ ಸ್ಪಷ್ಟವಾಗಿ ಉತ್ತರವಿರುವಾಗ, ಇವರೇ ಉತ್ತರವನ್ನು ಕೊಡಬೇಕು, ಅವರೇ ಉತ್ತರವನ್ನು ಕೊಡಬೇಕು ಎಂಬುದಲ್ಲ, ಇದರಲ್ಲಿ ಯಾವುದೇ ಪ್ರತಿಷ್ಠೆಯ ಪ್ರಶ್ನೆ ಇಲ್ಲ. ಮಾನ್ಯ ಸದಸ್ಯರುಏನೂ ಗೊತ್ತಿಲ್ಲದ ಮಂತ್ರಿಗಳು ಉತ್ತರ ಕೊಟ್ಟಿಬಿಟ್ಟರು ಎಂಬುದಾಗಿ ಮಾತನಾಡಬಾರದು. ಅವರೂ ಸಹ ಜವಾಬ್ದಾರಿಯುತ ಸಚಿವರು. ನೀವುಗಳು ಹೇಗೆ ಸದಸ್ಯರಾಗಿ ಬಂದು ಜವಾಬ್ದಾರಿಯುತವಾಗಿ ಮಾತನಾಡುತ್ತೀರಿ. ಅವರೂ ಅಷ್ಟೇ ಜವಾಬ್ದಾರಿಯುತವಾಗಿ ನಿಮಗಿಂತ ಹೆಚ್ಚು ಜವಾಬ್ದಾರಿಯುತವಾಗಿ ಮಾತನಾಡುತ್ತಿದ್ದಾರೆ. ಆದ್ದರಿಂದ ಆ ರೀತಿಯಾದ ಪದಗಳನ್ನೆಲ್ಲಾ ತಾವು ಬಳಸಬಾರದು.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅವರು ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಾರೆ. ನಾವುಗಳು ಕಾದುನೋಡೋಣ.

ಉಪಾಧ್ಯಕ್ಷರು:- ತಾವುಗಳು ದಯಮಾಡಿ ಕುಳಿತುಕೊಳ್ಳಿ. ನೀರಾವರಿ ಸಚಿವರು ಸ್ಟೇಟ್‌ಮೆಂಟ್ ಮಾಡಿ.

ಮಂತ್ರಿಗಳ ಹೇಳಿಕೆ.

ವಿಷಯ:- ಜುರಾಲ ಅಣೆಕಟ್ಟೆಯ ಎತ್ತರವನ್ನು ಏರಿಸುವ ಬಗ್ಗೆ.

ಶ್ರೀ ಕೆ.ಎನ್.ನಾಗೇಗೌಡ (ನೀರಾವರಿ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಜುರಾಲ ವಿಷಯದ ಬಗ್ಗೆ ಇಲ್ಲಿ ಗುರುವಾರ, ಮೇಲ್ಮನೆಯಲ್ಲಿ ಶುಕ್ರವಾರ ಸಾಕಷ್ಟು ಚರ್ಚೆಯಾಗಿ ಇದರ ಬಗ್ಗೆ ವಿರೋಧ ಪಕ್ಷದವರ ಮತ್ತು ಸರ್ವಪಕ್ಷದವರ ಸಭೆಯನ್ನು ಮಾಡಿ ನಿರ್ಧಾರಕ್ಕೆ ಬರುವುದಾಗಿ ಹೇಳಿದ್ದೆ. ಅದರಂತೆ ನಾವೆಲ್ಲಾ ಒಂದು ನಿರ್ಣಯಕ್ಕೆ ಬಂದಿದ್ದೇವೆ. ಆ ನಿರ್ಣಯದ ವಿಚಾರವನ್ನು ತಮ್ಮ ಅನುಮತಿ ಪಡೆದು ಸಭೆಯ ಗಮನಕ್ಕೆ ತರಬಯಸುವೆ. ''ಸರ್ವ ಪಕ್ಷಗಳ ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯದಂತೆ ಜುರಾಲ ಯೋಜನೆಗೆ ಸಂಬಂಧಿಸಿದಂತೆ ಅಣೆಕಟ್ಟಿನ ಎತ್ತರವನ್ನು ಹೆಚ್ಚಿಸಿರುವ ಬಗ್ಗೆ ಮತ್ತು ಯೋಜನೆಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಮಾನ್ಯ ಪ್ರಧಾನಿಯವರನ್ನು ಭೇಟಿಯಾಗಲು ಸರ್ವಪಕ್ಷಗಳ ಮುಖಂಡರ ನಿಯೋಗವೊಂದು ಸನ್ಮಾನ್ಯ ಮುಖ್ಯಮಂತ್ರಿಯವರ ನಾಯಕತ್ವದಲ್ಲಿ ಕರೆದುಕೊಂಡು ಹೋಗಲು ತೀರ್ಮಾನಿಸಲಾಗಿದೆ.''

ಶ್ರೀ ಡಿ.ವಿ.ಸದಾನಂದಗೌಡ:- ಎಂ.ಆರ್.ಪಿ.ಎಲ್. ತ್ಯಾಜ್ಯವಸ್ತುಗಳನ್ನು ಬಿಟ್ಟಿರುವ ಬಗ್ಗೆ ಉಸ್ತುವಾರಿ ಸಚಿವರು ಹೇಳಿಕೆ ನೀಡುವುದಿಲ್ಲವೆ?

ಉಪಾಧ್ಯಕ್ಷರು:- ಇಲ್ಲ.

ಶ್ರೀ ಡಿ.ವಿ.ಸದಾನಂದಗೌಡ:- ಇದನ್ನು ನಾವು ವಿರೋಧಿಸಿ ಸಭಾತ್ಯಾಗ ಮಾಡುತ್ತಿದ್ದೇನೆ.

(ಶ್ರೀ ಡಿ.ವಿ.ಸದಾನಂದಗೌಡ, ಶ್ರೀ ರುಕ್ಮಯ್ಯಪೂಜಾರಿ, ಶ್ರೀ ಅಂಗಾರ, ಶ್ರೀ ರಮಾನಾಥ ರೈ ಮುಂತಾದ ದಕ್ಷಿಣ ಕನ್ನಡ ಜಿಲ್ಲಾ ಶಾಸಕರು ಸಭಾತ್ಯಾಗ ಮಾಡಿದರು)

10. ವಿತ್ತೀಯ ಕಾರ್ಯಕಲಾಪಗಳು.

ವಿಷಯ:- ನಗರಾಭಿವೃದ್ಧಿ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ.

ಉಪಾಧ್ಯಕ್ಷರು:- ಮಾನ್ಯ ಸಗೀರ್ ಅಹಮದ್‌ರವರೆ, ತಾವು ಬೇಡಿಕೆಯ ಮೇಲೆ ಮಾತನಾಡಿ. ಈಗಾಗಲೇ ಇದರ ಬಗ್ಗೆ ತಮ್ಮ ಪಕ್ಷದವರು ನಲವತ್ತು ನಿಮಿಷ ಮಾತನಾಡಿದ್ದೀರಿ ಅದನ್ನು ಲಕ್ಷ್ಯಯಲ್ಲಿಟ್ಟುಕೊಂಡು ಮಾತನಾಡಿ. ತಮ್ಮ ಪಕ್ಷಕ್ಕೆ 185 ನಿಮಿಷ ಬೇಡಿಕೆಯ ಬಗ್ಗೆ ಮಾತನಾಡಲು ಅಲಾಟ್ ಮಾಡಲಾಗಿದೆ.

+ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು):- ಮಾನ್ಯ ಉಪಾಧ್ಯಕ್ಷರೆ, ನಾನು ನಮ್ಮ ಪಕ್ಷದ ಹಿರಿಯ ಮುಖಂಡರು ಮತ್ತು ನಮ್ಮ ಪಕ್ಷದ ಶಾಸನ ಸಭೆಯ ನಾಯಕರಾದ ಮಾನ್ಯ ಖರ್ಗೆಯವರ ಜೊತೆ ಮಾತನಾಡಿ ಸಮಯವನ್ನು ನಿಗದಿಪಡಿಸುವಲ್ಲಿ ತೀರ್ಮಾನ ಮಾಡಿಕೊಂಡಿದ್ದೇವೆ. ತಾವು ನಗರಾಭಿವೃದ್ಧಿ ಇಲಾಖೆಯ ಬಗ್ಗೆ ಚರ್ಚೆ ಮಾಡಲು ನಮ್ಮ ಪಕ್ಷಕ್ಕೆ ಮೂರು ಗಂಟೆಗಳ ಅವಕಾಶ ಕೊಟ್ಟಿದ್ದೀರಿ. ಆದರೆ ತಾವು ಆ ಭಾಗದ ಸದಸ್ಯರಿಗೆ ನಾವು ಮಾತನಾಡುವಾಗ ಸ್ವಲ್ಪ ತಾಳ್ಮೆಯಿಂದಿರಬೇಕೆಂದು ಮಾರ್ಗದರ್ಶನ ಮಾಡಬೇಕಾಗುತ್ತದೆ. ಉಪಮುಖ್ಯಮಂತ್ರಿಯವರು ಬಹಳ ಚೆನ್ನಾಗಿ ವಿಚಾರ ಹೇಳಿದ್ದಾರೆ.

04.30 ಪಿ.ಎಂ

ಸನ್ಮಾನ್ಯ ಉಪಾಧ್ಯಕ್ಷರೇ, ನಗರಾಭಿವೃದ್ಧಿಯ ಬೇಡಿಕೆ ಮೇಲೆ ಚರ್ಚೆ ನಡೆಯುತ್ತಾ ಇರುವಂತಹ ಸಂದರ್ಭದಲ್ಲಿ, ಈ ರಾಜ್ಯದ ಜನರಿಗೆ ಅದರಲ್ಲೂ ಬಡತನದ ರೇಖೆಯ ಅಡಿಯಲ್ಲಿ ಇರುವಂತಹ ಬಡವರಿಗೆ ನಿವೇಶನಗಳನ್ನು ಮತ್ತು ಮನೆಗಳನ್ನು ವಿತರಣೆ ಮಾಡುವುದರ ಬಗ್ಗೆ ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವುದರ ಬಗ್ಗೆ ನಾನು ಆಗಲೇ ಅನೇಕ ಮಾಹಿತಿಗಳನ್ನು ತಮ್ಮ ಮೂಲಕ ಸರ್ಕಾರಕ್ಕೆ ಒದಗಿಸಿದ್ದೇನೆ. ಮಾನ್ಯ ಉಪಾಧ್ಯಕ್ಷರೇ, ತಮ್ಮ ಗಮನಕ್ಕೆ ತರುವಂತಹ ಇನ್ನೊಂದು ವಿಚಾರ ಏನೆಂದರೆ, ಹಿಂದಿನ ಸಾಲಿನ ಅಧಿವೇಶನ ಪ್ರಾರಂಭ ಆಗುವಂತಹ ಸಂದರ್ಭದಲ್ಲಿ ನಮ್ಮ ಈ ರಾಜ್ಯದ ರಾಜ್ಯಪಾಲರವರು ಅವರ ಭಾಷಣದಲ್ಲೂ ಸಹ ವಿವರವಾಗಿ ಒಂದು ಹೇಳಿಕೆಯನ್ನು